ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಮನೆ ಹಂತದಲ್ಲಿ ಬೂದುನೀರನ್ನು ನಿರ್ವಹಿಸಿ ಸ್ವಚ್ಛ ಸುಂದರ ಪರಿಸರ ನಿರ್ಮಿಸಿ






ಪಾತ್ರೆ ತೊಳೆದ, ಸ್ನಾನ ಮಾಡಿದ, ಬಟ್ಟೆ ಒಗೆದ ನೀರನ್ನು ಬೂದುನೀರು ಎನ್ನುವರು. ಬೂದು ನೀರನ್ನು ಅಪಾಯಕಾರಿಯಲ್ಲದ ನೀರಾಗಿ ಮತ್ತು ಮರುಬಳಕೆ ಮಾಡಲು ಸಾಧ್ಯವಾಗುವ ನೀರನ್ನಾಗಿ ಪರಿವರ್ತಿಸುವುದಕ್ಕೆ ಬೂದು ನೀರಿನ ನಿರ್ವಹಣೆ ಎನ್ನುವರು. ಇದು ಶೌಚಾಲಯಕ್ಕೆ ಬಳಕೆಯಾದ ಕಪ್ಪು ನೀರಿನ ಹೊರತಾದ ನೀರಾಗಿದೆ.

ಕುಡಿಯಲು, ಅಡುಗೆ ಮಾಡಲು, ಸ್ನಾನಮಾಡಲು ಸಿಹಿನೀರಿನ ಮೇಲೆ ಅವಲಂಬನೆ ಇದೆ. ಆದರೆ ಉಳಿದ ಎಲ್ಲಾ ಮನೆಯ ಕೆಲಸಗಳಿಗೆ ನೀರಿನ ಮರುಬಳಕೆ ವಿಧಾನ ಬಳಸುವ ಮೂಲಕ ಜಲಮೂಲಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದಾಗಿದೆ.

## ನೀರನ್ನು ಹೀಗೆ ಮರುಬಳಸಿ :

- ಸ್ನಾನ ಮಾಡಿದ ನೀರನ್ನು ಮನೆಯ ಸುತ್ತಲಿನ ಮರಗಳಿಗೆ ಹೋಗುವಂತೆ ವ್ಯವಸ್ಥೆ ಮಾಡಿ
- ತರಕಾರಿ, ಸೊಪ್ಪುಗಳನ್ನು ತೊಳೆದ ನೀರನ್ನು ಸಸ್ಯಗಳಿಗೆ, ತರಕಾರಿ ಗಿಡಗಳಿಗೆ ಬಳಸಿ
- ಶೌಚಾಲಯ ತೊಳೆಯಲು ಹಾಗೂ ಫ್ಲಶ್ ಮಾಡಲು ಬಳಸಬಹುದು
- ಕುಡಿಯುವ ನೀರಿನ ಮೂಲಗಳಿಗೆ ಬೂದು ನೀರು ಸೇರದಂತೆ ನೋಡಿಕೊಳ್ಳಬೇಕು.
- ಸ್ನಾನ ಮಾಡಿದ, ಬಟ್ಟೆ ತೊಳೆದ, ಪಾತ್ರೆ ತೊಳೆದ ನೀರನ್ನು ಸಂಸ್ಕರಿಸಿಯೇ ತರಕಾರಿ, ಸೊಪ್ಪಿನ ಗಿಡಗಳಿಗೆ ಬಳಸಿ
- ವಾಟರ್ ಫಿಲ್ಟರ್ ನ ಹೆಚ್ಚುವರಿ ನೀರಿನಲ್ಲಿ ಮನೆಯನ್ನು ಒರೆಸಬಹುದು ಅಥವಾ ಶೌಚಾಲಯಕ್ಕೆ ಬಳಸಬಹುದು
- ಪಾತ್ರೆ ತೊಳೆದ ನೀರನ್ನು ತೆಂಗಿನ ಮರಗಳಿಗೆ ಹೋಗುವ ವ್ಯವಸ್ಥೆ ಮಾಡಬೇಕು.

**ಮನೆಯಲ್ಲಿ ಕೈದೋಟ, ಹಿತ್ತಲು ಇಲ್ಲದಂತಹ ಸಂದರ್ಭದಲ್ಲಿ ಮನೆಯಲ್ಲಿ ಉತ್ಪತ್ತಿಯಾದ ನೀರನ್ನು ನಿರ್ವಹಿಸಲು ಸಾಧ್ಯವಾಗದಾಗ ಇಂಗು-ಗುಂಡಿಯನ್ನು ನಿರ್ಮಿಸಬೇಕಾಗುತ್ತದೆ.**

## ಬೂದುನೀರನ್ನು ನಿರ್ವಹಿಸಲು ಇರುವ ವಿಧಾನಗಳು ಯಾವುದು ?

**01** ವೈಯಕ್ತಿಕ ಇಂಗುಗುಂಡಿ ನಿರ್ಮಾಣ | **02** ಸಾಮುದಾಯಿಕ ಇಂಗುಗುಂಡಿ ನಿರ್ಮಾಣ | **03** ಬೂದುನೀರು ಸಂಸ್ಕರಣ ಘಟಕಗಳು

ಮನೆಯ ಹಂತದಲ್ಲಿ ಬೂದುನೀರನ್ನು ನಿರ್ವಹಿಸುವುದು ವೈಯಕ್ತಿಕ ಇಂಗುಗುಂಡಿ ನಿರ್ಮಾಣದಿಂದ ಸಾಧ್ಯ. ಮನೆಯ ಅಕ್ಕಪಕ್ಕ ಇರುವ ಸ್ವಲ್ಪ ಜಾಗದಲ್ಲಿಯೆ ಇಂಗು-ಗುಂಡಿ ನಿರ್ಮಿಸಿಕೊಳ್ಳಬಹುದಾಗಿದೆ. ಇದು ಕಡಿಮೆ ವೆಚ್ಚದಾಯಕವು ಹೆಚ್ಚು ಉಪಯೋಗಕಾರಿಯೂ ಆಗಿರುತ್ತದೆ. ಇಂಗುಗುಂಡಿಯಲ್ಲಿ ಬೂದು ನೀರು ಸಂಸ್ಕರಣೆಗೆ ಒಳಪಟ್ಟು ಶುದ್ಧನೀರಾಗಿ ಮಾರ್ಪಟ್ಟು ಭೂಮಿಯಲ್ಲಿ ಇಂಗುತ್ತದೆ.

## ಬೂದುನೀರಿನ ಅಸಮರ್ಪಕ ನಿರ್ವಹಣೆಯಿಂದಾಗುವ ಸಮಸ್ಯೆಗಳು :

- ಮನೆಯ ಸುತ್ತಮುತ್ತ ಅಲ್ಲಲ್ಲಿ ನೀರು ನಿಂತು ಕೊಳಚೆ ಪ್ರದೇಶವಾಗಿ ಮಾರ್ಪಾಡುತ್ತದೆ.
- ನಿಂತ ಕೊಳಚೆ ನೀರು ಮನೆಯ ಸುತ್ತ ವಾಸನೆಗೆ ಕಾರಣವಾಗುತ್ತದೆ
- ಕೊಳಚೆ ನೀರಿನಿಂದ ನೊಣ, ಸೊಳ್ಳೆಗಳ ಉತ್ಪತ್ತಿ ಹೆಚ್ಚಳವಾಗುತ್ತದೆ
- ಸಾಂಕ್ರಾಮಿಕ ರೋಗಗಳಿಗೆ ಜನರು ತುತ್ತಾಗುವ ಸಂದರ್ಭವಿರುತ್ತದೆ
- ಮನೆಯ ಸುತ್ತ ಮುತ್ತ ಬಾವಿ ಇದ್ದರೆ ಅದಕ್ಕೆ ಬೂದುನೀರು ಸೇರ್ಪಡೆಯಾಗುವ ಸಾಧ್ಯತೆ ಇರುತ್ತದೆ
- ಬೂದುನೀರು ರಸ್ತೆಯ ಮೇಲೆ ಹರಿಯುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ
- ಬೂದುನೀರು, ಕೆರೆ, ನದಿ ಹಳ್ಳಕೊಳ್ಳವನ್ನು ಸೇರಿದರೆ ಜಲಮಾಲಿನ್ಯ ಉಂಟಾಗುತ್ತದೆ
- ಕೊಳಚೆನೀರು ಕೆರೆ, ನದಿಗಳಿಗೆ ಸೇರುವುದರಿಂದ ನೀರಿನಲ್ಲಿನ ಜಲಚರಗಳು ಸಾಯುತ್ತವೆ.
- ಬೂದುನೀರು ಸೇರಿದ ಕೆರೆ, ಮತ್ತು ನದಿ ನೀರನ್ನು ಯಾವ ಕೆಲಸ ಕಾರ್ಯಗಳಿಗೂ ಬಳಸಲು ಸಾಧ್ಯವಾಗುವುದಿಲ್ಲ
- ಪರಿಸರದ ಸ್ವಚ್ಛತೆ ಹಾಗೂ ನೈರ್ಮಲ್ಯಕ್ಕೆ ಧಕ್ಕೆಯಾಗುತ್ತದೆ
- ಬೂದುನೀರು ಸೇರಿದ ಕೆರೆಯ ನೀರನ್ನು ಪ್ರಾಣಿಗಳು ಕುಡಿಯುವುದರಿಂದ ಅವುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

## ಬೂದು ನೀರಿನ ನಿರ್ವಹಣೆಯಿಂದ ಆಗುವ ಉಪಯೋಗ

- ಶುದ್ಧ ನೀರಿನ ಬಳಕೆಯ ಪ್ರಮಾಣವನ್ನು ತಗ್ಗಿಸಬಹುದು.
- ಅಂತರ್ಜಲ ಸಂರಕ್ಷಣೆಗೆ ಬೂದು ನೀರಿನ ನಿರ್ವಹಣೆ ಉತ್ತಮ ಮಾರ್ಗ
- ಅಂತರ್ಜಲಮಟ್ಟ ಹೆಚ್ಚುತ್ತದೆ
- ಜೀವ ಸಂಕುಲಗಳನ್ನು ಉಳಿಸಬಹುದು
- ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಬಹುದು
- ನೀರಿನಿಂದ ಹರಡುವ ರೋಗಗಳಿಂದ ದೂರವಿರಬಹುದು
- ಮನೆಯ ಹಿತ್ತಲು ಸದಾ ಹಸಿರಾಗಿ ತಂಪಾಗಿರಲು ಸಾಧ್ಯ

ವೈಯಕ್ತಿಕ ಸ್ವಚ್ಛತೆ ಮತ್ತು ನಮ್ಮ ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಯು ಅಭಿವೃದ್ಧಿಯ ಸಂಕೇತವಾಗಿದೆ. ಸ್ವಚ್ಛ ಸುಂದರ ಗ್ರಾಮಗಳು ಸುಸ್ಥಿರ ಅಭಿವೃದ್ಧಿಯ ಮತ್ತು ಬೆಳವಣಿಗೆಯ ಸೂಚಕಗಳಾಗಿವೆ. ಶುಚಿತ್ವದ ಅಭ್ಯಾಸಗಳನ್ನು ಬೆಳೆಸಿಕೊಳ್ಳಿ ಮತ್ತು ಸುತ್ತಮುತ್ತಲ ಪರಿಸರದ ಸ್ವಚ್ಛತೆ ಕಾಪಾಡುವ ಮೂಲಕ ನಿಮ್ಮ ಆರೋಗ್ಯವನ್ನು ಕಾಯ್ದುಕೊಳ್ಳಿ.

**ಜಲಸಂರಕ್ಷಣೆಗೆ ಬೂದು ನೀರು ನಿರ್ವಹಣೆ ಉತ್ತಮ ಮಾರ್ಗ ಎಂಬುದನ್ನು ಅರಿಯಿರಿ**